

# ಚಿಟ್ಟೆಗಳ ಪ್ರಣಯದ ಹೊತ್ತು ಏಡಿಜೇಡಕ್ಕೆ ಆಹಾರದ ತುತ್ತು!

**ಮಿಲನಕೂಟದಲ್ಲಿ ಮಗ್ನವಾಗಿದ್ದ ಚಿಟ್ಟೆಗಳ ಮೇಲೆ ಎರಗಿದ ಏಡಿ ಜೇಡದ ಬೇಟೆಯ ಕಥನ.**

■ ಶಶಿಧರಸ್ವಾಮಿ ಆರ್. ಹಿರೇಮಠ

ಪುಸ್ತಕ ಓದುತ್ತಾ ಕುಳಿತಿದ್ದೆ. ಅಣ್ಣನ ಮಗಳು ಅವಸರವಾಗಿ ಬಂದು ಮಲ್ಲಿಗೆ ಹೂವಿನ ಗಿಡದಲ್ಲಿ ಎರಡು ಚಿಟ್ಟೆಗಳಿವೆ ಬೇಗ ಬನ್ನಿ ಎಂದು ಒಂದೇ ಉಸಿರಿನಲ್ಲಿ ಕರೆದಾಗ ತಕ್ಷಣವೇ ಹೊರಟೆ. ಆ ಚಿಟ್ಟೆಗಳನ್ನು ನೋಡಿ ಚಕಿತನಾದೆ. ಮಿಲನಗೊಂಡ ಚಿಟ್ಟೆಗಳಲ್ಲಿ ಒಂದು ಚಿಟ್ಟೆಯನ್ನು ಶ್ವೇತ ಏಡಿಜೇಡ ಭಕ್ಷಿಸುವುದರಲ್ಲಿ ಮಗ್ನವಾಗಿತ್ತು.

ಈ ಚಿಟ್ಟೆಗಳನ್ನು ಕನ್ನಡದಲ್ಲಿ ‘ಗೆರೆ ಅಲೆಮಾರಿ ಚಿಟ್ಟೆ’ ಎನ್ನುವರು. ಇಂಗ್ಲಿಷ್‌ನಲ್ಲಿ ಮಾಟಲ್ಡ್ ಎಮಿಗ್ರಂಟ್ (Mottled Emigrant) ಎಂದು ಕರೆದು, ವೈಜ್ಞಾನಿಕವಾಗಿ ಕ್ಯಾಟೊಪ್ಸಿಲಿಯಾ ಪೈರಾಂಥೆ (Catopsilia pyranthe) ಎಂದು ಹೆಸರಿಸಿದ್ದಾರೆ. ಸಂಧಿಪದಿಗಳ ಕೀಟವರ್ಗದ ಲೇಫಿಡೊಪ್ಟೆರಾ ಗಣದ ಬಿಳಿ ಮತ್ತು ಹಳದಿ ಚಿಟ್ಟಗಳ ಪೈಯರಿಡೇ ಕುಟುಂಬಕ್ಕೆ ಸೇರಿಸಲಾಗಿದೆ.

ಹೂ ಜೇಡವನ್ನು ಕನ್ನಡದಲ್ಲಿ ‘ಶ್ವೇತ ಏಡಿಜೇಡ’ ಎಂದು ಕರೆದು, ಇಂಗ್ಲಿಷ್‌ನಲ್ಲಿ ವೈಟ್ ಕ್ರ್ಯಾಬ್ ಸ್ಪೈಡರ್ ಅಥವಾ ಫ್ಲವರ್ ಸ್ಪೈಡರ್ ಎಂದು ಹೆಸರಿಸಲಾಗಿದೆ. ವೈಜ್ಞಾನಿಕವಾಗಿ ಥಾಮಿಸಸ್ (Thomisus spp) ಕುಲವಾಗಿದ್ದು, ಅರಾಕ್ನಿಡಾ ವರ್ಗದ, ಅರೈನೇ ಗಣದ, ಥೋಮಿಸಿಡೆ ಕುಟುಂಬಕ್ಕೆ ಸೇರಿಸಲಾಗಿದೆ.

ಶ್ವೇತ ವರ್ಣದ ಏಡಿಜೇಡವು ಮಲ್ಲಿಗೆಯ ಹೂವಿನ ಬಿಳಿ ವರ್ಣಕ್ಕೆ ತಕ್ಕಂತೆ ಛದ್ಮವೇಷಧಾರಿಯಾಗಿ ಎಲೆ ಮತ್ತು ಹೂವಿನ ಮಧ್ಯದಲ್ಲಿ ಸುಮಾರು ಸಮಯ ಮರೆ ಮಾಚಿಕೊಂಡು ಬೇಟೆಗಾಗಿ ಕಾದು ಕುಳಿತಿತ್ತು. ಬಿರಿದು ನಿಂತ ಸೂಜಿ ಮಲ್ಲಿಗೆಯ ಸುವಾಸನಾಯುಕ್ತ ಪರಿಮಳಕ್ಕೆ ಮನಸೋತ ಹೆಣ್ಣು ಅಲೆಮಾರಿ ಚಿಟ್ಟೆಯು ಮಕರಂದ ಹೀರಲು ಅಲ್ಲಿಗೆ ಬಂದಿದೆ. ಅದು ಸೂಸಿದ ಪ್ಯಾರಾಮೋನ್ ರಾಸಾಯನಿಕವನ್ನು ಅರಸಿ ಅಲ್ಲಿಗೆ ಗಂಡು ಚಿಟ್ಟೆ ಬಂದು ಹೆಣ್ಣು ಚಿಟ್ಟೆಯೊಂದಿಗೆ ಮಿಲನಗೊಂಡಿದೆ.

ಆ ಸಮಯದಲ್ಲಿ ಛದ್ಮವೇಷಧಾರಿಯಾದ ಈ ಶ್ವೇತ ಏಡಿಜೇಡ ಥಟ್ಟನೆ ಎಗರಿ ಹೆಣ್ಣು ಚಿಟ್ಟೆಯನ್ನು ಹಿಡಿದಪ್ಪಿ ತನ್ನ ವಿಷಯುಕ್ತ ರಸವನ್ನು ಚಿಟ್ಟೆಯ ದೇಹದಲ್ಲಿ ಪ್ರವಿಸಿ ರಸಾಹಾರ ಹೀರುವುದರಲ್ಲಿ ನಿರತವಾಗಿತ್ತು. ಚಿಟ್ಟೆಗಳನ್ನು ಹಿಡಿಯಲು



ಪರಭಕ್ಷಕ ಏಡಿಜೇಡವು ಸಂಪೂರ್ಣ ವ್ಯಾಪ್ತಿಯ ತಂತ್ರಗಳನ್ನು ಅಳವಡಿಸಿಕೊಂಡಿರುತ್ತದೆ. ಆಗ ಎಷ್ಟೇ ಜಾಗೃತವಾಗಿದ್ದರೂ ಬಲಿಯಾಗುವುದು ಶತಃಸಿದ್ಧ.

ಪ್ರಕೃತಿಯಲ್ಲಿ ಶೇ.50ರಷ್ಟು ಚಿಟ್ಟೆಗಳು ಸಂತಾನೋತ್ಪತ್ತಿಗೂ ಮೊದಲೇ ಪರಭಕ್ಷಕಗಳಿಗೆ ಬಲಿಯಾಗುತ್ತವೆ. ತಮ್ಮ ಮೊದಲ ಹಾರಾಟಕ್ಕೆ ಮುಂಚೆಯೇ ಅಥವಾ ಕೋಶದಿಂದ ಹೊರ ಬಂದಾಗ ಪರಭಕ್ಷಕಗಳಾದ ಜೇಡ, ಪಕ್ಷಿ, ಕಣಜ, ಕಪ್ಪೆ, ಓತಿ, ಕೊಡತೆಹುಳು, ಮ್ಯಾಂಟಿಸ್, ಹಲ್ಲಿ, ದರೋಡೆನೊಣಗಳ ದಾಳಿಗೆ ಒಳಗಾಗಿ ಬಲಿಯಾಗುತ್ತವೆ. ಪರಭಕ್ಷಕಗಳಿಂದ ಜೀವನ ಚಕ್ರದ ವಿವಿಧ ಹಂತಗಳಲ್ಲಿ ಚಿಟ್ಟೆಗಳು ಬಲಿಯಾಗುವುದು ಪ್ರಕೃತಿಯಲ್ಲಿನ ಸಹಜಕ್ರಿಯೆ. ಹೆಚ್ಚಾಗುವ ಚಿಟ್ಟೆ ಸಂಖ್ಯೆಯನ್ನು ನಿಯಂತ್ರಿಸಿ ತಡೆಗಟ್ಟುವ ಪ್ರಕೃತಿಯ ನಿಯಮ. ಅವುಗಳ ಜೀವನ ಚಕ್ರದ ವಿವಿಧ ಹಂತಗಳಲ್ಲಿ ಈ ರೀತಿಯ ಪರಭಕ್ಷಣೆ ಅತೀ ಅವಶ್ಯ.

ಚಿಟ್ಟೆಗೆ ತನ್ನ ಸಂಪೂರ್ಣ ಜೀವನ ಚಕ್ರದ ಎಲ್ಲ ಹಂತದಲ್ಲಿ ಆಕ್ರಮಣದ ಭೀತಿ ಇದ್ದೇ ಇರುತ್ತದೆ. ಆದರೆ ಮಿಲನ ಪ್ರಕ್ರಿಯೆಯಲ್ಲಿ ಈ ಪರಭಕ್ಷಣೆ ಅಪರೂಪದ ಸನ್ನಿವೇಶವೆನಿಸಿತ್ತು.

ಸ್ವಲ್ಪ ಗಾಳಿ ಬೀಸುತ್ತಲೇ ಟೊಂಗೆಯು ಅಲುಗಾಡಿ ಬಿರಿದು ನಿಂತ ಹೂವು ಆ ಟೊಂಗೆಯಿಂದ ಬೇರ್ಪಟ್ಟು ಕೆಳಕ್ಕೆ ಬಿತ್ತು. ಎಲೆಗೆ ಆಧಾರವಾಗಿ ನಿಂತಿದ್ದ ಗಂಡು ಚಿಟ್ಟೆಯು ಪಟಪಟನೆ ರೆಕ್ಕೆ ಬಡಿದುಕೊಂಡು ಹೆಣ್ಣಿನಿಂದ ಬೇರ್ಪಟ್ಟು ಹಾರಿಹೋಯಿತು. ಹೆಣ್ಣು ಚಿಟ್ಟೆ ಏಡಿ ಜೇಡಕ್ಕೆ ತುತ್ತಾಗಿ ತನ್ನ ಕನಸನ್ನು ಕೊನೆಗೊಳಿಸಿತ್ತು. ■